ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

27

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ - ಪ್ರಶ್ನೋತ್ತರ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 6-3-2021

# ಸಂಗಮೇಶ್ ಅಮಾನತಿಗೆ ಇಡೀ ದಿನದ ಕಲಾಪ ಬಲಿ

## ಭದ್ರಾವತಿ ಶಾಸಕನ ಸಸ್ಪೆಂಡ್ ರದ್ದತಿಗೆ ಕಾಂಗ್ರೆಸ್ ಪಟ್ಟು
## ಬಟ್ಟೆ ಬಿಚ್ಚಲು ಇದು ಕ್ಲಬ್ಬಾ? ಬಿಜೆಪಿ ಪ್ರಶ್ನೆ, ಜಟಾಪಟಿ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಭದ್ರಾವತಿ ಕಾಂಗ್ರೆಸ್ ಶಾಸಕ ಬಿ.ಕೆ.ಸಂಗಮೇಶ್ ಅವರ ಅಮಾನತು ಹಿಂಪಡೆಯುವಂತೆ ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಸದನದಲ್ಲಿ ಧರಣಿ ಮುಂದುವರೆಸಿದ್ದು, ಈ ವೇಳೆ ಸತತ ಕೋಲಾಹಲ ಹಾಗೂ ಬಿಜೆಪಿ-ಕಾಂಗ್ರೆಸ್ ಶಾಸಕರ ನಡುವೆ ತೀವ್ರ ವಾಕ್ಸಮರ ನಡೆದಿದೆ. ಹೀಗಾಗಿ ಸತತ 2ನೇ ದಿನವೂ ಇಡೀ ದಿನದ ಕಲಾಪ ಬಲಿಯಾಯಿತು.

ತನ್ಮೂಲಕ ಬಜೆಟ್ ಅಧಿವೇಶನದ ಮೊದಲ ಎರಡು ದಿನ ಕೈಗೆತ್ತಿಕೊಂಡಿದ್ದ 'ಒಂದು ದೇಶ, ಒಂದು ಚುನಾವಣೆ' ಕುರಿತ ವಿಶೇಷ ಚರ್ಚಾ ಕಲಾಪ ವಿಫಲವಾಯಿತು. » 14



- ಇಡೀ ದಿನ ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರ ಧರಣಿ, ವಾಕ್ಸಮರ
- ಕಾಂಗ್ರೆಸ್ ಶಾಸಕರಿಂದ ಸದನದಲ್ಲಿ 'ಅಯ್ಯಯ್ಯೋ ಅನ್ಯಾಯ' ಕೂಗು
- ನಿನ್ನೆಯೂ ನಡೆಯದ 'ಏಕ ದೇಶ ಏಕ ಚುನಾವಣೆ' ಕುರಿತ ಚರ್ಚೆ

# ಸಂಗಮೇಶ್ ಅಮಾನತಿಗೆ ಇಡೀ ದಿನದ ಕಲಾಪ ಬಲಿ



ಪ ಮೊದಲ ಪುಟದಿಂದ

ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ದೇಶದಲ್ಲೇ ಮೊದಲ ಬಾರಿಗೆ ಎರಡು ದಿನಗಳ ಕಾಲ 'ಒಂದು ದೇಶ, ಒಂದು ಚುನಾವಣೆ' ಕುರಿತ ಚರ್ಚೆಗೆ ಅವಕಾಶ ನೀಡಿದ್ದರು. ಮೊದಲ ದಿನವಾದ ಗುರುವಾರ ವಿಪಕ್ಷಗಳು ಈ ಚರ್ಚೆ ವಿರೋಧಿಸಿದ್ದರಿಂದ ವಿಧಾನಸಭೆಯ ಇಡೀ ದಿನದ ಕಲಾಪ ಬಲಿಯಾಗಿತ್ತು. ಅಲ್ಲದೆ, ಚರ್ಚೆ ವಿರೋಧಿಸಿ ನಡೆಯುವ ಧರಣಿ ವೇಳೆ ಬಿ.ಕೆ. ಸಂಗಮೇಶ್ ಅಂಗಿ ಕಳಚಿದ್ದು ವಿವಾದಕ್ಕೆ ಕಾರಣವಾಗಿತ್ತು. ಸಂಗಮೇಶ್ ಒಂದು ವಾರ ಕಲಾಪದಿಂದ ಅಮಾನತು ಮಾಡಲಾಗಿತ್ತು.

ಶುಕ್ರವಾರ ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಈ ವೇಳೆ ವಿಪಕ್ಷ ನಾಯಕ ಸಿದ್ದರಾಮಯ್ಯ, 'ಈ ಸದನದಲ್ಲಿ ಗೂಳಿಹಟ್ಟಿ ಶೇಖರ್ ಬಟ್ಟೆ ಬಿಚ್ಚಿಕೊಂಡಿದ್ದರು. ವಿಧಾನಪರಿಷತ್‌ನಲ್ಲಿ ಸಭಾಧ್ಯಕ್ಷರ ಪೀಠದಲ್ಲೇ ಅಷ್ಟು ದೊಡ್ಡ ಗಲಾಟೆ ಆಗಿತ್ತು. ಅಂತಹ ಯಾವುದೇ ಘಟನೆ ಇಲ್ಲಿ ನಡೆದಿಲ್ಲ. ಇಡೀ ಘಟನೆಯ ಮೇಲೆ ಸುಳ್ಳು ಕೊಲೆ ಆರೋಪ ಹೊರಿಸಿರುವುದರಿಂದ ಮುಖ ಮುಚ್ಚಿಕೊಳ್ಳಲು ಶರ್ಟ್ ಬಿಚ್ಚಿದ್ದಾರೆ. ಇಷ್ಟಕ್ಕೇ ಒಂದು ವಾರ ಅಮಾನತು ಮಾಡಿರುವುದು ಕಾನೂನು ಬಾಹಿರ. ಕೂಡಲೇ ಅಮಾನತು ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

'ಹೊರಗಡೆ ಬೆತ್ತಲೆ ಹೋರಾಟಗಳೇ ಜಾಸ್ತಿ ನಡೆಯುತ್ತಿವೆ. ಇಲ್ಲೇನು ಸಂಗಮೇಶ್ ಅವರು ಬೆತ್ತಲೆ ಆಗಿದ್ದಾರಾ? ಶರ್ಟ್ ಕಳಚಿದ್ದು ಅಷ್ಟೆ ಎಂದು ಪರಿಗಣಿಸಿದರೆ ಒಂದು ದಿನ ಅಮಾನತು ಮಾಡಬಹುದಿತ್ತು. ಅದನ್ನು ಬಿಟ್ಟು ಒಂದು ವಾರ ಅಮಾನತು ಮಾಡಿರುವುದು ಸರ್ವಾಧಿಕಾರಿ ಧೋರಣೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, 'ಅನ್ಯಾಯ ಆಗಿದ್ದರೆ ಸದನದಲ್ಲಿ ಬಟ್ಟೆ ಬಿಚ್ಚಬೇಕಾ? ಸಂಗಮೇಶ್ ಅವರು ಮಾತನಾಡಲು ಅವಕಾಶ ನೀಡುವಂತೆ ಸ್ಪೀಕರ್ ಅವರಿಗೆ ನೋಟಿಸ್ ನೀಡಿದ್ದರು. ಅವರು ಸಹ ಬೆಳಗ್ಗೆ 10.30 ಗಂಟೆಗೆ ಚರ್ಚಿಸಲು ಅವಕಾಶ ನೀಡಿದ್ದರು. ಪೀಠಕ್ಕೆ ಅಗೌರವ ತೋರುವುದನ್ನು ಕಾಂಗ್ರೆಸ್ ಸಹ ಸಮರ್ಥಿಸಬಾರದು' ಎಂದರು. ಬಿಜೆಪಿ ಶಾಸಕ ಅರಗ ಜ್ಞಾನೇಂದ್ರ, 'ಬಟ್ಟೆ ಬಿಚ್ಚಿ ಕುಣಿಯಲು ಇದೇನು ಕ್ಯಾಬರೆ ಕ್ಲಬ್ಬಾ?' ಎಂದು ಪ್ರಶ್ನಿಸಿದರು.

ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, 'ನಿಮಗೆ ಚರ್ಚೆಯಲ್ಲಿ ಭಾಗವಹಿಸಲು ಇಷ್ಟವಿಲ್ಲದಿದ್ದರೆ ಬೇರೆಯ ಸದಸ್ಯರು ಮಾತನಾಡಲು ಅವಕಾಶ ನೀಡಿ. ಬೇರೆಯವರ ಹಕ್ಕು ಮೊಟಕುಗೊಳಿಸುವ ಅಧಿಕಾರ ನಿಮಗಿಲ್ಲ' ಎಂದು ಕಿಡಿಕಾರಿದರು.

**ಅನ್ಯೋನ್ಯ ಅನ್ಯಾಯ:** ಬಸವರಾಜ ಬೊಮ್ಮಾಯಿ ಅವರು 'ಒಂದು ದೇಶ ಒಂದು ಚುನಾವಣೆ' ವಿಷಯದ ಬಗ್ಗೆ ಮಾತು ಆರಂಭಿಸಿದಾಗ ಸಿದ್ದರಾಮಯ್ಯ ಅವರು, 'ಬೊಮ್ಮಾಯಿ ಮಾತನಾಡುವುದು ಕೇಳಬಾರದು. ಜೋರಾಗಿ ಕೂಗಿ' ಎಂದು ತಮ್ಮ ಸದಸ್ಯರಿಗೆ ಕರೆ ನೀಡಿದರು. ಇದರಿಂದ ರೊಚ್ಚಿಗೆದ್ದ ಕಾಂಗ್ರೆಸ್ ಸದಸ್ಯರು 'ಅನ್ಯೋನ್ಯ ಅನ್ಯಾಯ', 'ಸ್ಪೀಕರ್ ಸರ್ಕಾರದ ಕೈಗೊಂಬೆಯಾಗಿದ್ದಾರೆ' ಎಂಬಿತ್ಯಾದಿ ಘೋಷಣೆಗಳನ್ನು ಜೋರಾಗಿ ಕೂಗಿ ಸದನದಲ್ಲಿ ಕೋಲಾಹಲ ಸೃಷ್ಟಿಸಿದರು.

ಇದರಿಂದ 11.20ಕ್ಕೆ ಆರಂಭವಾದ ಕಲಾಪ 10 ನಿಮಿಷದಲ್ಲೇ ಅಂದರೆ 11.30 ಗಂಟೆಗೆ ಅರ್ಧ ಗಂಟೆ ಕಾಲ ಮುಂದೂಡಲಾಯಿತು. ಬಳಿಕ 12.15ಕ್ಕೆ ಸೇರಿದ ಕಲಾಪದಲ್ಲಿ ಮತ್ತದೇ ಗಲಾಟೆ ಮುಂದುವರಿದಿದ್ದರಿಂದ ಸ್ಪೀಕರ್ ಅವರು ಕಾಂಗ್ರೆಸ್ ಸದಸ್ಯರ ಮನವೊಲಿಸಲು ಯತ್ನಿಸಿದರು. ಪ್ರಯೋಜನವಾಗದ ಹಿನ್ನೆಲೆಯಲ್ಲಿ 12.30 ಗಂಟೆಗೆ ಸದನವನ್ನು 3.30ರವರೆಗೆ ಮುಂದೂಡಿಕೆ ಮಾಡಿದರು. ಬಳಿಕ 3.40ಕ್ಕೆ ಸೇರಿದ ಸಭೆಯಲ್ಲೂ ಇದೇ ಗದ್ದಲ ಮರುಕಳಿಸಿದ ಹಿನ್ನೆಲೆಯಲ್ಲಿ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು. ಹೀಗಾಗಿ ಇಡೀ ದಿನದ ಕಲಾಪ ಬಲಿಯಾಯಿತು.